# ವಿಶ್ವ ದರ್ಶನ

ಡಾ. ವಿಜಯ ಸಂಕೇಶ್ವರ ಮೀಡಿಯಾ ಸ್ಕೂಲ್ ಪ್ರಾಯೋಗಿಕ ಪತ್ರಿಕೆ


22-11-2025 | ಶನಿವಾರ    ಸಂಪುಟ-3    ಸಂಚಿಕೆ-6    ಪುಟಗಳು-2


## ನುಡಿಮುತ್ತು

ಯಾವಾಗಲೂ ಸಕ್ರಿಯರಾಗಿರಿ. ಜವಾಬ್ದಾರಿಯನ್ನು ತೆಗೆದುಕೊಳ್ಳಿ. ನೀವು ನಂಬುವ ವಿಷಯಗಳಿಗಾಗಿ ಕೆಲಸ ಮಾಡಿ. ನೀವು ಮಾಡದಿದ್ದರೆ ನಿಮ್ಮ ಭವಿಷ್ಯವನ್ನು ನೀವು ಇತರರಿಗೆ ಒಪ್ಪಿಸುತ್ತೀರಿ.

**ಎ.ಪಿ.ಜೆ ಅಬ್ದುಲ್ ಕಲಾಂ**

## ಮಂತ್ರ ಮಾಂಗಲ್ಯದತ್ತ...



" ರೂಪ ರೂಪಗಳನು ದಾಟಿ
ನಾಮ ಕೋಟಿಗಳನು ಮೀಟಿ
ಎದೆಯ ಬಿರಿಯೇ ಭಾವದೀಟಿ
ಓ ನನ್ನ ಚೇತನ, ಆಗು ನೀ ಅನಿಕೇತನ.."

ಕುವೆಂಪುರವರ ಚಿಂತನೆಗಳೆಂದರೆ ಅದು ದೂರ ದೃಷ್ಟಿಗೂ ಭಾವಗಳ ಅಪ್ಪುಗೆಗೂ ಹಿತವಿದ್ದ ಹಾಗೆ.ಕುವೆಂಪು ಬರಹಗಳು ಯಾರಿಗೆ ತಾನೇ ಕಾಡುವುದಿಲ್ಲ.. ಅದೊಂತರ ಸಾಹಿತ್ಯ ಕ್ಷೇತ್ರದ ದಿವ್ಯತಾರೆ. ಏನೋ ಹೇಳುತ್ತಾರಲ್ಲ "ಕುವೆಂಪುರವರ ಹಾಗೆ ಅಲ್ಲ.. ಅವರ ಬಗ್ಗೆ ಬರೆಯಲೂ ಕೂಡ ಕುವೆಂಪುವೇ ಆಗಬೇಕು" ಎಂದು.ತೀರ ಇಳಿಯ ಮನಸ್ಥಿತಿಗೆ ದೊರಕುವ ಚಿಂತನೆಗಳಲ್ಲವಲ್ಲ ಅವು..

ಕುವೆಂಪುರವರ ಕೆಲವು ಬರವಣಿಗೆಗಳ ತತ್ವವನ್ನಾಧರಿಸಿ ನೋಡಿದಾಗ ಅವರ ಪಂಚಮಂತ್ರಗಳ ತಿರುಳು ಬಹುವಾಗಿ ಸೆಳೆಯುತ್ತದೆ. ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ,ಪೂರ್ಣದೃಷ್ಟಿ ಯಾವ ಮತ, ಪಂಥದ ಅಗತ್ಯವಿಲ್ಲದೇ ಸರ್ವಸ್ಥರದ ಆಯಾಮಗಳಲ್ಲಿ ಎಲ್ಲವನ್ನೂ ಭಗವದ್ ದೃಷ್ಟಿಯಿಂದ ಕಾಣುವ ಪೂರ್ಣದೃಷ್ಟಿ. ಈ ಮೌಲ್ಯಗಳು ಮನುಷ್ಯರನ್ನು ಕೂಡಿ ಬಾಳಿಸುವತ್ತ ನಡೆಸುತ್ತವೆ.

ಪ್ರತಿ ಹುಡುಗ, ಹುಡುಗಿಯೂ ಆಡಂಬರದ ವಿವಾಹ ಆಗದೇ ಜಾತಿ, ಧರ್ಮ, ಪಂಥ ಇವುಗಳನ್ನೆಲ್ಲ ಹೊಸಕಿ ಹಾಕಿ ವೈಜ್ಞಾನಿಕ ತತ್ವದ ವಾಸ್ತವ ಸ್ಥಿತಿಯನ್ನು ಅರಿತು ಸರಳ ವಿವಾಹದ ಮೂಲಕ ಒಬ್ಬರ ಬದುಕಿಗೆ ಮತ್ತೊಬ್ಬರನ್ನು ಬರಮಾಡಿಕೊಳ್ಳಬೇಕು. ಇಲ್ಲಿ ಯಾವುದೇ ಮುಹೂರ್ತ ಬೇಡ, ಅಧ್ಯಾತ್ಮಿಕ ಕಟ್ಟುಪಾಡುಗಳು ಬೇಡ,ಪುರೋಹಿತರು ಬೇಡ. ಒಬ್ಬೊಬ್ಬರನ್ನೊಬ್ಬರು ಸಂಪೂರ್ಣ ಒಪ್ಪಿ, ಎಲ್ಲವನ್ನೂ ಒಟ್ಟಿಗೆ ನಿಭಾಯಿಸಿಕೊಂಡು ಬದುಕುವೆವು ಎಂದು ಪ್ರಕೃತಿಯ ಸಾಕ್ಷಿಯಾಗಿ ವಿವಾಹ ಮಾಡಿಕೊಂಡರೆ ಸಾಕು.

"ನೀವು ಲೋಕವನ್ನಾಗಲಿ, ಸಮಾಜವನ್ನಾಗಲಿ ಬದಲಾಯಿಸಲು ಸಾಧ್ಯವಿಲ್ಲ. ನಿಮ್ಮ ಮನಸು ಪರಿವರ್ತನೆ ಆಗದೇ ಏನೂ ಆಗುವುದಿಲ್ಲ. ಆದರ್ಶಗಳು ನಾವು ದಿನ ಪಠಣ ಮಾಡುವ ಗೊಡ್ಡು ಮಂತ್ರಗಳಲ್ಲ. ಅವು ನಮ್ಮ ಜೀವನದ ಉಸಿರು. ದುಂದುವೆಚ್ಚವನ್ನು ಪ್ರದರ್ಶನಕ್ಕಿಡದೇ ನಿಮ್ಮ ಬದುಕನ್ನು ಸುಧಾರಣೆ ಮಾಡಿಕೊಳ್ಳಿ. "ಎಂಬುದು ಈ ಕೃತಿಯಲ್ಲಿ ರಸಋಷಿಗಳು ನಮಗೆ ನೀಡುವ ಸಂದೇಶ ಇಂದಿನ ಆಡಂಬರ ಪ್ರದರ್ಶನದ ಆಚರಣೆಗಳಿಗೆ ಮಂತ್ರ ಮಾಂಗಲ್ಯ ಒಂದು ಉತ್ತಮ ಪಾಠ. ಮಂತ್ರ ಮಾಂಗಲ್ಯ ಎಂದದ್ದೇ ಶಾಸ್ತ್ರ ಸಂಪ್ರದಾಯಗಳನ್ನೆಲ್ಲಾ ಕಿತ್ತು ಬಿಸಾಕಲೇ ಬೇಕೆಂದಿಲ್ಲ.ನಾವು ನಂಬಿದ ಎಲ್ಲವೂ ಮೌಢ್ಯಗಳು ಎಂದೂ ಅಲ್ಲ. ತಮ್ಮ ನಂಬಿಕೆಯನ್ನು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ತೋರಿಸುತಾರೆ.'.ಆದರೆ ಆ ನಂಬಿಕೆಯನ್ನು ದಾಳ ಮಾಡಿಕೊಂಡು ಅದೆಷ್ಟು ಜನ ಮೋಸಕ್ಕೆ ಒಳಗಾಗಿಲ್ಲ? ಜಗತ್ತಿನ ಕಣ್ಣು ಕುಕ್ಕಿದ ಭಾರತದ ಹೆಸರಾಂತ ಶ್ರೀಮಂತನ ಮದುವೆ ಅದೆಷ್ಟು ಜನರಲ್ಲಿ ಆಸೆ ಹುಟ್ಟಿಸಿಲ್ಲ? ಅಲ್ಲಿಗೆ ಮದುವೆ ಎಂದರೆ ಏನು? ಬರೀ ಶ್ರೀಮಂತಿಕೆಯ ಪ್ರದರ್ಶನ ಎಂದಾಗಲಿಲ್ಲವೆ? ಒಟ್ಟಿನಲ್ಲಿ ಮಂತ್ರ ಮಾಂಗಲ್ಯ ನಮ್ಮನ್ನು ಬದಲಾಯಿಸುತ್ತದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ನಮ್ಮಲ್ಲಿನ ಒಂದಿಷ್ಟು ಅಂಧಕಾರವನ್ನು ಎತ್ತಿ ಹಿಡಿಯುವ ಕೆಲಸ ಮಾಡುತ್ತದೆ. "ಎಲ್ಲವೂ ಬದಲಾಗಲೇ ಬೇಕೆಂದಿಲ್ಲ. ಎಲ್ಲಿ ಬದಲಾವಣೆ ಆಗಬೇಕು ಎಂದು ಅರಿತರೆ ಸಾಕು.

" ನೂರು ಮತದ ಹೊಟ್ಟು ತೂರಿ,
ಎಲ್ಲ ತತ್ವದೆಲ್ಲೆ ಮೀರಿ
ನಿರ್ದಿಗಂತವಾಗಿ ಏರಿ,
ಓ ನನ್ನ ಚೇತನ ಆಗು ನೀ ಅನಿಕೇತನ"

ಎಂಬ ವಾಣಿಯನ್ನು ಪ್ರತಿಯೊಬ್ಬರೂ ಅರಿತುಕೊಂಡರೆ ಸಮಾಜದ ಸಾಕಷ್ಟು ಅಂಶಗಳು ವಾದ ವಿವಾದಗಳಿಲ್ಲದೆ ಬದಲಾಗಿ ಬಿಡುತ್ತದೆ. ಯೋಚಿಸಿದರೆ ಇದು ಕೇವಲ ಮಂತ್ರ ಮಾಂಗಲ್ಯವಲ್ಲ.ಮಂಗಳದ ಮಂತ್ರ.

✍ ಶಿಲ್ಪಾ ಪೂಜಾರಿ

# ಸಾಲುಮರಗಳ ಸಾಲಿನಲ್ಲಿ ಅಮರಳಾದ ತಿಮ್ಮಕ್ಕ

## ವೃಕ್ಷಮಾತೆ ಇನ್ನಿಲ್ಲ

**ವೃ**ಕ್ಷಮಾತೆ,ಪದ್ಮಶ್ರೀ ಪುರಸ್ಕೃತೆ,ಮರಗಳನ್ನೇ ಮಕ್ಕಳಂತೆ ಸಲುಹಿದ ಸಾಲು ಮರದ ತಿಮ್ಮಕ್ಕ ಸಾಕಷ್ಟು ಮರಗಳಿಗೆ ಜೀವ ತುಂಬಿ ಸಲುಹಿದಂತ ಮೇರು ವ್ಯಕ್ತಿತ್ವ. ಅಂತಹ ವ್ಯಕ್ತಿತ್ವದ ಗರಿಯೊಂದು ತನ್ನ ಪಯಣವನ್ನು ಮುಗಿಸಿದ್ದು ಪರಿಸರ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ. ವೃಕ್ಷಮಾತೆ ಸಾಲು ಮರದ ತಿಮ್ಮಕ್ಕ ತಮ್ಮ ಬದುಕಿನ ಹಾದಿಯ ಮೂಲಕವೇ ಸಾಕಷ್ಟು ಜನರಿಗೆ ಮಾದರಿಯಾಗಿದ್ದಾರೆ. ರಸ್ತೆಯ ಬದಿಗಳಲ್ಲಿ ನೂರಾರು ಮರಗಳನ್ನು ನೆಟ್ಟು, ನೀರೆರೆದು, ಅವುಗಳನ್ನು ಬೆಳೆಸಿ ಭೂಮಿಗೆ ಅಂತರ್ಜಲವನ್ನು ಕೊಟ್ಟು ಪೋಷಿಸಿದವಳು ಈಕೆ. ಇವರ ಬದುಕು ನಿಜಕ್ಕೂ ಅವರ್ಣನೀಯವಾದದ್ದು..

### ತಿಮ್ಮಕ್ಕ ನಡೆದು ಬಂದ ಹಾದಿ

ತಿಮ್ಮಕ್ಕ ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನಲ್ಲಿ ಜನಿಸಿದರು. ತಂದೆ ಚಿಕ್ಕರಂಗಯ್ಯ,ತಾಯಿ ವಿಜಯಮ್ಮ. ಮನೆಯಲ್ಲಿ ಆರ್ಥಿಕ ಪರಿಸ್ಥಿತಿ ಸರಿ ಇರದಿದ್ದ ಕಾರಣ ತಿಮ್ಮಕ್ಕ ದನ ಮೇಯಿಸುವ ಕೆಲಸಕ್ಕೆ ಹೋಗುತ್ತಿದ್ದರು. ಪರಿಸ್ಥಿತಿ ಹದಗೆಟ್ಟಾಗ ಕಲ್ಲು ಗಣಿಯಲ್ಲಿ ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಿದ್ದರು. ಇವರಿಗೆ 12 ವರ್ಷವಿದ್ದಾಗ ಮಾಗಡಿ ತಾಲ್ಲೂಕಿನ ಹುಲಿಕಲ್ ಗ್ರಾಮದ ಚಿಕ್ಕಯ್ಯ ಎಂಬುವವರನ್ನು ಮದುವೆ ಆದರು. ಮದುವೆಯಾಗಿ ಸಾಕಷ್ಟು ವರ್ಷಗಳಾದರೂ ಕೂಡಾ ಇವರಿಗೆ ಮಕ್ಕಳಾಗಿರಲಿಲ್ಲ. ಮಕ್ಕಳಿಲ್ಲದ ಕೊರಗನ್ನು ನೀಗಿಸುವುದಕ್ಕಾಗಿ ರಸ್ತೆಯ ಬದಿಯಲ್ಲಿ ಸಾಲು ಸಾಲು ಸಸಿಗಳನ್ನು ನೆಡಲು ಪ್ರಾರಂಭಿಸಿದರು. ಕುದೂರಿನಿಂದ ಹುಲಿಕಲ್ ತನಕ ರಾಜ್ಯ ಹೆದ್ದಾರಿಗಳಲ್ಲಿ ಆಲದ ಸಸಿ ನೆಟ್ಟು ಪೋಷಿಸಿದರು. ಪತಿಯೊಡನೆ ಸೇರಿ ಆಲದ ಸಸಿಗಳಿಗೆ ಕಸಿ ಮಾಡಿದರು. ಹತ್ತು ಸಸಿಗಳಿಂದ ಶುರುವಾದ ಈ ಪ್ರಯಾಣ 8000 ಮರಗಳ ತನಕ ತಲುಪಿತ್ತು. ಇರುವ ಅಲ್ಪ ಆದಾಯದಲ್ಲೇ ಸಸಿಗಳಿಗೆ ಜೀವ ತುಂಬಿದರು. ನೀರಿನ ಸಮಸ್ಯೆ ಎದುರಾದಾಗ ಕಿಲೋಮೀಟರ್ ಗಟ್ಟಲೇ ನೀರನ್ನು ಕಾಲ್ನಡಿಗೆಯಲ್ಲಿ ಹೊತ್ತೇ ಸಾಗಿಸಿದರು. ಸಸಿಗಳನ್ನು ಜಾನುವಾರುಗಳಿಂದ ರಕ್ಷಿಸಲು ಕಾಡಿನಿಂದ ಮುಳ್ಳಿನ ಪೊಡೆಗಳನ್ನು ತಂದು ಹೊದೆಸುತ್ತಿದ್ದರು. ತಮ್ಮ ಪತಿಯ ನಿಧನದ ನಂತರ ಮತ್ತೆ ಮರಗಳ ಮಡಿಲಿಗೆ ಬಿದ್ದ ತಿಮ್ಮಕ್ಕ ಹಗಲಿರುಳು ಎನ್ನದೇ ಶ್ರಮಿಸಿ ಸರಿಸುಮಾರು ಎಂಟು ಸಾವಿರ ಮರಗಳನ್ನು ಸಮಾಜಕ್ಕೆ ಬಳುವಳಿಯಾಗಿ ನೀಡಿದರು. ಪರಿಸರ ಮಾತೆ ಸಾಲುಮರದ ತಿಮ್ಮಕ್ಕನ ಹೋರಾಟದ ಫಲವಾಗಿ ಮರಗಳ ಪ್ರೇಮ ಅವರನ್ನು ಚಿರಸ್ಥಾಯಿಯಾಗಿಸಿದೆ.



### ರಾಜ್ಯದ ಜನತೆಗೆ ತಿಮ್ಮಕ್ಕನ ಭಾವುಕ ಸಂದೇಶ

ಪ್ರೀತಿಯ ನನ್ನ ನಾಡಿನ ಜನತೆಗೆ ನಿಮ್ಮ ಪ್ರೀತಿಯ ಅಜ್ಜಿ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಮಾಡುವ ನಮಸ್ಕಾರಗಳು. ಈ ಜಗತ್ತಿನಲ್ಲಿ ಯಾವುದೂ ಶಾಶ್ವತವಲ್ಲ. ಇರುವಷ್ಟು ದಿನ ಯಾರಿಗೂ ತೊಂದರೆ ಕೊಡದೆ, ಹಿಂಸೆಯಾಗದಂತೆ, ಬಡವ, ಶ್ರೀಮಂತ, ಭಿಕ್ಷುಕ, ಅಸಹಾಯಕ ಎನ್ನದೆ ಎಲ್ಲರೂ ಒಂದೇ ತರಹ ಬದುಕಿ. ಎಲ್ಲರನ್ನು ಗೌರವಿಸಿ, ಪ್ರೀತಿಸಿ, ದೇಶವನ್ನು ಪ್ರೀತಿಸಿ, ದೇಶ ಚೆನ್ನಾಗಿದ್ದರೆ ಎಲ್ಲರೂ ಚಂದ. ಚಿಕ್ಕವರಾಗಲಿ, ದೊಡ್ಡವರಾಗಲಿ, ಬಡವರಾಗಲಿ, ಶ್ರೀಮಂತರಾಗಲಿ, ಗಿಡ ನೆಟ್ಟು ಮರಗಳನ್ನಾಗಿ ಬೆಳೆಸಿ, ಗೋ ಕಟ್ಟೆಗಳನ್ನು ಕಟ್ಟಿಸಿ, ಕೆರೆ ಕಟ್ಟಿಸುವುದರ ಮೂಕ ಪ್ರಾಣಿಗಳಿಗೆ ನೀರಿನ ವ್ಯವಸ್ಥೆ ಮಾಡಿಸಿ. ಹಣ್ಣು ಬಿಡುವ ಮರಗಳನ್ನು ಬೆಳೆಸಿ ಹಕ್ಕಿಪಕ್ಷಿಗಳ ಆಧಾರವಾಗಲಿ. ದೇಶದಲ್ಲಿರುವ ಎಲ್ಲರಿಗೂ ಒಳ್ಳೆಯದಾಗಲಿ. ದೇಶ ಚೆನ್ನಾಗಿರಲಿ. ಬಡವನನ್ನು ಕಂಡು ಭಿನ್ನ ಭೇದ ಮಾಡಬೇಡಿ. ಮನುಷ್ಯರೆಲ್ಲ ಒಂದೇ, ಹಸಿದವರಿಗೆ ಅನ್ನ ಕೊಡಿ. ನಾನು ಮಾಡಿದ ಗಿಡ ನೆಡುವ ಉಳಿಸುವ ಕಾರ್ಯವನ್ನು ನಿರಂತರವಾಗಿ ಮುಂದುವರಿಸಿ ಮತ್ತು ನನ್ನ ಮಗನಾದ ಉಮೇಶ ದೇಶದಲ್ಲೆಲ್ಲಾ ಗಿಡ ನೆಡುವ ಮತ್ತು ನೆಡೆಸುವ ಕಾರ್ಯ ಮಾಡುತ್ತಾ ಸಾಗು.ಮತ್ತೊಮ್ಮೆ ಎಲ್ಲರಿಗೂ ದೇವರು ಒಳ್ಳೆಯದು ಮಾಡಲಿ, ಎಲ್ಲರಿಗೂ ಸತಿವತಿ ಭಾಗ್ಯ ಇರಲಿ. ಮಕ್ಕಳ ಭಾಗ್ಯವಿರಲಿ, ನಿಮ್ಮ ಮನೆ ಚೆನ್ನಾಗಿರಲಿ, ದೇಶ ಚೆನ್ನಾಗಿರಲಿ, ಮಕ್ಕಳಿಗೆಲ್ಲ ಒಳ್ಳೆಯ ವಿದ್ಯೆ ಬರಲಿ, ಎಲ್ಲರೂ ಗಿಡ ಮರಗಳನ್ನು ಬೆಳೆಸಿ. ನನ್ನ ಪತಿ ದೇವರ ಆಶೀರ್ವಾದ ಮತ್ತು ನನ್ನ ಆಶೀರ್ವಾದ ನನ್ನ ಮಗನ ಮೇಲಿರಲಿ, ಎಲ್ಲರಿಗೂ ಒಳ್ಳೆಯದಾಗಲಿ ಎಂದು ತಿಮ್ಮಕ್ಕ ಸಂದೇಶ ನೀಡಿದ್ದಾರೆ.

### ಸಿ.ಎಂ ಸಿದ್ದರಾಮಯ್ಯ ಸಂತಾಪ

ವೃಕ್ಷಮಾತೆ ಸಾಲುಮರದ ತಿಮ್ಮಕ್ಕನವರ ನಿಧನದ ಸುದ್ದಿ ತಿಳಿದು ದುಃಖಿತನಾಗಿದ್ದೇನೆ. ಸಾವಿರಾರು ಗಿಡಗಳನ್ನು ನೆಟ್ಟು, ಅವುಗಳನ್ನು ಮಕ್ಕಳಂತೆ ಸಲಹಿದ ತಿಮ್ಮಕ್ಕನವರು ತಮ್ಮ ಬಹುಪಾಲು ಜೀವಿತ ಕಾಲವನ್ನು ಪರಿಸರ ಸಂರಕ್ಷಣೆಗಾಗಿ ಮುಡಿಪಾಗಿಟ್ಟವರು. ಇಂದು ತಿಮ್ಮಕ್ಕನವರು ನಮ್ಮನ್ನು ಅಗಲಿದರೂ ಅವರ ಪರಿಸರ ಪ್ರೇಮ ಅವರನ್ನು ಚಿರಸ್ಥಾಯಿಯಾಗಿಸಿದೆ. ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಎಕ್ಸ್ ಖಾತೆಯಲ್ಲಿ ಸಂತಾಪ ಸೂಚಿಸಿದ್ದಾರೆ.

### ವಿಶ್ವಮಟ್ಟದಲ್ಲಿ ಗುರುತಿಸುವಿಕೆ


2016 ರಲ್ಲಿ, ಬಿಬಿಸಿ ತಿಮ್ಮಕ್ಕ ಅವರನ್ನು ವಿಶ್ವದ ಅತ್ಯಂತ ಪ್ರಭಾವಶಾಲಿ ಮತ್ತು ಸ್ಫೂರ್ತಿದಾಯಕ ಮಹಿಳೆಯರಲ್ಲಿ ಒಬ್ಬರು ಎಂದು ಪಟ್ಟಿ ಮಾಡಿದೆ. ಕರ್ನಾಟಕ ಸರ್ಕಾರವು ತಿಮ್ಮಕ್ಕ ಅವರಿಗೆ ಕ್ಯಾಬಿನೆಟ್ ದರ್ಜೆ ಸ್ಥಾನಮಾನವನ್ನು ನೀಡಿತ್ತು ಮತ್ತು ತಿಮ್ಮಕ್ಕ ಅವರನ್ನು ಪರಿಸರ ರಾಯಭಾರಿಯಾಗಿ ನೇಮಿಸಲಾಗಿತ್ತು. 1999 ರಲ್ಲಿ ಅವರ ಕೆಲಸಗಳನ್ನು ಆಧರಿಸಿದ 'ತಿಮ್ಮಕ್ಕ ಮತ್ತು 284 ಮಕ್ಕಳು' ಎಂಬ ಡಾಕ್ಯುಮೆಂಟರಿ ಚಿತ್ರ ನಿರ್ಮಾಣಗೊಂಡಿತು. 2000 ರಲ್ಲಿ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರದರ್ಶನವನ್ನೂ ಕಂಡಿತು. ಆ ಮೂಲಕ, ತಿಮ್ಮಕ್ಕನವರ ಕೆಲಸ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಮನವನ್ನೂ ಸೆಳೆಯಿತು. ಅಮೆರಿಕವು ಕ್ಯಾಲಿಫೋರ್ನಿಯಾದಲ್ಲಿ 'ತಿಮ್ಮಕ್ಕ ರಿಸೋರ್ಸಸ್ ಫಾರ್ ಎನ್ವೈರನ್‌ಮೆಂಟಲ್ ಎಜುಕೇಶನ್' ಎಂಬ ಸಂಸ್ಥೆಯನ್ನೂ ತೆರೆದಿದೆ. ಇದು ಅವರ ಅಂತರರಾಷ್ಟ್ರೀಯ ಮಟ್ಟದ ಗುರುತಿಸುವಿಕೆಗೆ ಸಾಕ್ಷಿಯಾಗಿದೆ. 2019 ನೇ ಇಸವಿಯಲ್ಲಿ ಮಂಡ್ಯ ಜಿಲ್ಲೆಯ ಹೆದ್ದಾರಿಯಲ್ಲಿ ರಸ್ತೆ ಅಗಲೀಕರಣಕ್ಕಾಗಿ ಮರಗಳನ್ನು ಕಡಿಯಬೇಕಾದ ಸನ್ನಿವೇಶ ಎದುರಾದಾಗ ಮರಗಳನ್ನು ಕಡೆಯದಂತೆ ಸ್ವತಃ ತಿಮ್ಮಕ್ಕನೇ ಹೋರಾಟಕ್ಕೆ ಇಳಿದಿದ್ದರು.ಈ ಜಾಗದಲ್ಲಿ ತಿಮ್ಮಕ್ಕನ ಪತಿ ನೆಟ್ಟಿದ್ದ 385 ಮರಗಳಿದ್ದವು.ತಿಮ್ಮಕ್ಕನ ಹೋರಾಟದ ಫಲವಾಗಿ ಅಷ್ಟೂ ಮರಗಳ ಜೀವ ಉಳಿಯಿತು.

### ತಿಮ್ಮಕ್ಕನ ಕಡೆಯ ದಿನಗಳು

ದೀರ್ಘಕಾಲದಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಕಳೆದ ಕೆಲವು ವಾರಗಳಿಂದ ಬೆಂಗಳೂರಿನ ಜಯನಗರದ ಅಪೋಲೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ ಚಿಕಿತ್ಸೆಗೆ ಸ್ಪಂದಿಸದೇ ಗುರುವಾರ ಕೊನೆಯುಸಿರೆಳೆದರು ಎಂದು ವರದಿಯಾಗಿದೆ. ಅವರಿಗೆ 114 ವರ್ಷಗಳಾಗಿದ್ದು ತನ್ನ ಕಡೆಯ ದಿನಗಳಲ್ಲೂ ಕೂಡಾ ಮರಗಳನ್ನು ಸ್ಮರಿಸಿದ್ದರು ಎಂದು ಹೇಳಲಾಗುತ್ತಿದೆ.

### ತಿಮ್ಮಕ್ಕನಿಗೆ ಒಲಿದ ಪ್ರಶಸ್ತಿಗಳು

**1995– ರಾಷ್ಟ್ರೀಯ ಪೌರ ಪ್ರಶಸ್ತಿ**
**1997–ಇಂದಿರಾ ಪ್ರಿಯದರ್ಶಿನಿ ವೃಕ್ಷಮಿತ್ರ ಪ್ರಶಸ್ತಿ**
**1997– ವೀರಚಕ್ರ ಪ್ರಶಸ್ತಿ**
**2000– ಕರ್ನಾಟಕ ಕಲ್ಪವಲ್ಲಿ ಪ್ರಶಸ್ತಿ,**
**2004–ಗಾಡ್‌ಫ್ರಿ ಫಿಲಿಪ್ಸ್ ಧೀರತೆ ಪ್ರಶಸ್ತಿ,**
**ಮಹಿಳಾ ಮತ್ತು ಶಿಶು ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ ಇವರಿಂದ ಮಾನ್ಯತೆಯ ಪ್ರಮಾಣ ಪತ್ರ**
**ಭಾರತೀಯ ವೃಕ್ಷ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ, ಬೆಂಗಳೂರು ಇವರಿಂದ ಶ್ಲಾಘನೆಯ ಪ್ರಮಾಣ ಪತ್ರ**
**ಪಂಪಾಪತಿ ಪರಿಸರ ಪ್ರಶಸ್ತಿ,**
**ಬಾಬಾಸಾಹೇಬ್ ಅಂಬೇಡ್ಕರ್ ಪ್ರಶಸ್ತಿ,**
**ವನಮಾತೆ ಪ್ರಶಸ್ತಿ,**
**ಶ್ರೀಮಾತಾ ಪ್ರಶಸ್ತಿ,**
**ಕರ್ನಾಟಕ ಪರಿಸರ ಪ್ರಶಸ್ತಿ,**
**ನ್ಯಾಷನಲ್ ಸಿಟಿಜನ್ ಪ್ರಶಸ್ತಿ,**
**ರಾಜ್ಯೋತ್ಸವ ಪ್ರಶಸ್ತಿ**
**2010–ನಾಡೋಜ ಪ್ರಶಸ್ತಿ**
**2019 – ಪದ್ಮಶ್ರೀ ಪ್ರಶಸ್ತಿ**



### ತಿಮ್ಮಕ್ಕನವರ ಕುರಿತು ಅಚ್ಚರಿಯ ವಿಷಯಗಳು

- ತಿಮ್ಮಕ್ಕ 384 ಮರಗಳನ್ನು ನೆಟ್ಟದ್ದು ಯಾವುದೇ ಸರ್ಕಾರಿ ನೆರವಿಲ್ಲದೆ.
- ಮಳೆಯಿಲ್ಲದ ರಾತ್ರಿ ಗಂಟೆಗಳ ಕಾಲ ಕಿಲೋಮೀಟರ್ ನಡೆದು ಗಿಡಗಳಿಗೆ ನೀರುಣಿಸುತ್ತಿದ್ದರು.
- ಮಕ್ಕಳಿಲ್ಲದ ದುಃಖ ಮರಗಳ ಮೂಲಕ ತಣಿಸಿದವರು.
- ತಿಮ್ಮಕ್ಕಮ್ಮರಿಗೆ ಶಾಲೆಯ ಶಿಕ್ಷಣ ಇರಲಿಲ್ಲ.
- 60 ವರ್ಷದ ನಂತರವೂ ಮರ ನೆಡುವ ಕಾರ್ಯ ಮುಂದುವರಿಸಿದವರು.
- ಅವರ ಮನೆಗೆ ಹೋಗುವವರಿಗೇ ಮೊದಲು ಗಿಡ ಕೊಡುತ್ತಿದ್ದರು.
- ರಸ್ತೆ ಪಕ್ಕದ ಮರಗಳನ್ನು ಬೆಳಸಲು ಸರ್ಕಾರದಿಂದ ವೇತನವೂ ಇರಲಿಲ್ಲ.
- ಮರಗಳಿಗೆ ಬೇಲಿ ಕಟ್ಟಿ ರಕ್ಷಿಸಲು ಅವರು ಹಗ್ಗ, ಕಂಟೆ, ಕೊಂಬೆ ಎಲ್ಲವನ್ನು ಕೂಡಿದ್ದರು.
- ತಾವು ಪಡೆದ ಬಹುಮಾನ ಹಣವನ್ನು ಮತ್ತೆ ಪರಿಸರ ಕಾರ್ಯಕ್ಕೆ ಬಳಕೆ ಮಾಡಿದರು
- ಸಾಲುಮರದ ತಿಮ್ಮಕ್ಕ' ಎಂಬ ಹೆಸರು ಜನರು ಕೊಟ್ಟದ್ದು; ಅವರು ಸ್ವತಃ ಅದನ್ನು ಬಳಸಲಿಲ್ಲ.

### ನನಸಾಗದೇ ಉಳಿದ ಕನಸು

"ಸರಕಾರ ನನಗೆ ಸೂರು ಕೊಡುವುದು ಬೇಡ. ನನ್ನೂರಲ್ಲಿ ನನ್ನ ಹೆಸರಿನ ಹೆರಿಗೆ ಆಸ್ಪತ್ರೆ ಕಟ್ಟಿಸುವ ಮೂಲಕ ಬಾಣಂತಿಯರ ಹಾಗೂ ಶಿಶುಗಳ ಮರಣವನ್ನು ತಪ್ಪಿಸಬೇಕು. ಈ ಬಗ್ಗೆ ಸರಕಾರಕ್ಕೆ ಹಲವು ಬಾರಿ ಮನವಿ ಮಾಡಿಕೊಂಡಿದ್ದೆನೆ. ಆದರೆ ಇದುವರೆಗೂ ಅದು ಈಡೇರಿಲ್ಲ" ಎಂದು ಒಂಬತ್ತು ವರ್ಷಗಳ ಹಿಂದೆ ತಿಮ್ಮಕ್ಕ ಕಾರ್ಯಕ್ರಮವೊಂದರಲ್ಲಿ ಹೇಳಿಕೊಂಡಿದ್ದರು.

ತನ್ನೂರಿನ ಹೆಣ್ಣುಮಕ್ಕಳು ಹೆರಿಗೆಗಾಗಿ ಕಷ್ಟ ಪಡಬಾರದು ಎನ್ನುವ ಉದ್ದೇಶದಿಂದ ಆಸ್ಪತ್ರೆಯನ್ನು ಕಟ್ಟಿಸಲು ಸಾಕಷ್ಟು ವರ್ಷಗಳಿಂದ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಲೇ ಬಂದಿದ್ದರು. ಸರಕಾರದಿಂದ ಎರಡು ಎಕರೆ ಜಮೀನು ಮಂಜೂರಾದರೂ ಕೂಡಾ ಕಾಮಗಾರಿ ಶುರುವಾಗಿರಲಿಲ್ಲ. ತನ್ನ ಪತಿಯ ಹೆಸರಿನಲ್ಲಿ ಆಸ್ಪತ್ರೆಯನ್ನು ಕಟ್ಟಿಸಿ ಎಲ್ಲಾ ಹೆಣ್ಣು ಮಕ್ಕಳು ಆ ಮೂಲಕ ಉಪತಯೋಗವನ್ನು ಪಡೆದುಕೊಳ್ಳಬೇಕು ಎಂದು ಅವರು ಬಹಳ ಹೋರಾಡಿದರು. ಸಾಲು ಸಾಲು ಮರಗಳನ್ನು ನೆಟ್ಟು ಪ್ರಕೃತಿಗೆ ತನ್ನದೇ ಆದ ಕೊಡುಗೆಯನ್ನು ಕೊಟ್ಟ ತಿಮ್ಮಕ್ಕನ ಕನಸು ಕನಸಾಗಿಯೇ ಉಳಿದುಕೊಂಡಿತು.

# ಕಣ್ಮನ ಸೆಳೆದ ವಿಜ್ಞಾನ ವಸ್ತು ಪ್ರದರ್ಶನ

ಯಲ್ಲಾಪುರ : ಪಟ್ಟಣದ ವಿಶ್ವದರ್ಶನ ಕೇಂದ್ರೀಯ ಶಾಲೆಯಲ್ಲಿ ಶುಕ್ರವಾರ ವಿಜ್ಞಾನ ವಸ್ತು ಪ್ರದರ್ಶನವನ್ನು ಆಯೋಜಿಸಲಾಗಿತ್ತು.ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ್ದ ಬಿಸ್ಗೋಡ್ ಪ್ರೌಢಶಾಲಾ ವಿಜ್ಞಾನ ಶಿಕ್ಷಕ ಸದಾನಂದ ದಬಗಾರ ಮಾತನಾಡಿ, ವಿದ್ಯಾರ್ಥಿಗಳಲ್ಲಿರುವ ಸೂಕ್ತ ಪ್ರತಿಭೆಯನ್ನು ಅನಾವರಣಗೊಳಿಸಲು ಹಾಗೂ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಅರಿವನ್ನು ಮೂಡಿಸಲು ,ಸ್ಪರ್ಧಾ ಮನೋಭಾವನೆಯನ್ನು ಬೆಳೆಸಲು ಇಂತಹ ಸ್ಪರ್ಧೆಗಳು ಅತ್ಯವಶ್ಯಕ ಎಂದು ಹೇಳಿದರು.

ಈ ಪ್ರದರ್ಶನದಲ್ಲಿ 1ರಿಂದ 10 ನೇ ವರ್ಗದವರೆಗೆ 200 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪ್ರದರ್ಶನದಲ್ಲಿ ಸೋಲಾರ್ ಎನರ್ಜಿ ಫೋಟೋಸಿನ್ಥಸಿಸ್ ಧಾನ್ಯಗಳು ,ಔಷಧಿ ಸಸ್ಯಗಳು, ಉಸಿರಾಟದ ವ್ಯವಸ್ಥೆ ಜೀರ್ಣಾಂಗ ವ್ಯವಸ್ಥೆ, ಮಾನವನ




ಹೃದಯ ಮಾದರಿಗಳು ಹಾಗೂ ಚಿತ್ರ ಪಟಗಳು, ನೀರಿನಿಂದ ಗಾಳಿಯಿಂದ ವಿದ್ಯುತ್ ತಯಾರಿಕೆ ಏತ ನೀರಾವರಿ ಪದ್ಧತಿ, ದ್ಯುತಿ ಸಂಶ್ಲೇಷಣೆ ಕ್ರಿಯೆ ಮುಂತಾದ ಕಾರ್ಯನಿರ್ವಹಿಸುವ ಮಾದರಿಗಳು ನೋಡುಗರ ಗಮನ ಸೆಳೆದವು.ಸ್ಪರ್ಧೆಯ ನಿರ್ಣಾಯಕರಾಗಿ ಎಸ್ ಎಲ್ ಭಟ್, ಕೃಷ್ಣ ಭಟ್ , ವಿನಾಯಕ್ ಭಟ್ ಹಾಗೂ ಶ್ರೀಮತಿ ಕಾವ್ಯ ಹೆಗಡೆ ಪಾಲ್ಗೊಂಡಿದ್ದರು. ಸಂಸ್ಥೆಯ ಅಧ್ಯಕ್ಷ ಹರಿಪ್ರಕಾಶ ಕೋಣೆಮನೆ ವಿದ್ಯಾರ್ಥಿಗಳ ವಸ್ತು ಪ್ರದರ್ಶನವನ್ನು ವೀಕ್ಷಿಸಿ ಪ್ರೋತ್ಸಾಹಿಸಿದರು.

ಕಾರ್ಯಕ್ರಮದಲ್ಲಿ ವಿಶ್ವದರ್ಶನ ಕೇಂದ್ರೀಯ ಶಾಲೆಯ ಪ್ರಾಂಶುಪಾಲೆ ಮಹಾದೇವಿ ಭಟ್ಟ ಹಾಗೂ ಉಪ ಪ್ರಾಂಶುಪಾಲೆ ಆಸ್ಮಾ ಶೇಕ್ ಉಪಸ್ಥಿತರಿದ್ದರು. ವಿಜ್ಞಾನ ಶಿಕ್ಷಕಿ ಸಂಪದಾ ಗಾಂವಕರ್ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

# ಅಂತರಾಷ್ಟ್ರೀಯ ದೂರದರ್ಶನ ದಿನಾಚರಣೆ: ನ 21



ಪ್ರತಿವರ್ಷ ನವೆಂಬರ್ 21 ಅನ್ನು ವಿಶ್ವಸಂಸ್ಥೆಯು ಅಂತರಾಷ್ಟ್ರೀಯ ದೂರದರ್ಶನ ದಿನಾಚರಣೆಯಾಗಿ ಘೋಷಿಸಿದೆ. ಮಾನವ ಸಮಾಜದ ಮೇಲೆ ದೂರದರ್ಶನದ ಅಪಾರವಾದ ಪ್ರಭಾವವನ್ನು ಗುರುತಿಸುವ ಉದ್ದೇಶದಿಂದ ಈ ದಿನವನ್ನು ಆಚರಿಸಲಾಗುತ್ತಿದೆ. ಮಾಹಿತಿ, ಮನರಂಜನೆ, ಶಿಕ್ಷಣ ಹಾಗೂ ಜಾಗೃತಿ ಈ ನಾಲ್ಕು ಕ್ಷೇತ್ರಗಳಲ್ಲಿ ಜನಸಾಮಾನ್ಯರ ಬದುಕನ್ನು ಬದಲಾಯಿಸಿರುವ ಅತ್ಯಂತ ಮಹತ್ವದ ಮಾಧ್ಯಮವೆಂದರೆ ಅದು ಟಿವಿ.

ದೂರದರ್ಶನವನ್ನು ಕಂಡುಹಿಡಿಯಲ್ಪಟ್ಟ ನಂತರ ಜಗತ್ತಿನ ನೂರಾರು ದೇಶಗಳಲ್ಲಿ ಜ್ಞಾನ ಮತ್ತು ಸಂಸ್ಕೃತಿಯ ವಿನಿಮಯಕ್ಕೆ ಹೊಸ ದಾರಿಯನ್ನು ತೆರೆದಿಡಲಾಯಿತು. ಗ್ರಾಮ-ನಗರ, ಶ್ರೀಮಂತ-ಬಡ, ವಿದ್ಯಾವಂತ-ಅವಿದ್ಯಾವಂತರು ಯಾರೇ ಆಗಿದ್ದರೂ ಟಿವಿ ಎಲ್ಲರನ್ನೂ ಒಂದೇ ವೇದಿಕೆಯಲ್ಲಿ ನಿಲ್ಲಿಸುವಂತಹ ಶಕ್ತಿ ಹೊಂದಿದೆ. ಸುದ್ದಿ ವಾಹಿನಿಗಳು ದೇಶ-ವಿದೇಶಗಳ ಘಟನೆಗಳನ್ನು ತಕ್ಷಣ ಮನೆಮನೆಗೆ ತಲುಪಿಸುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸುತ್ತಿವೆ. ಶಿಕ್ಷಣ ವಾಹಿನಿಗಳು ವಿದ್ಯಾರ್ಥಿಗಳಿಗೆ ಪಾಠಪುಸ್ತಕದ ಹೊರಗಿನ ಜ್ಞಾನವನ್ನು ನೀಡುತ್ತಿವೆ. ಕೃಷಿ, ಆರೋಗ್ಯ, ಉದ್ಯೋಗ ಹಾಗೂ ತಂತ್ರಜ್ಞಾನ ಸಂಬಂಧಿತ ಕಾರ್ಯಕ್ರಮಗಳು ಜನಜೀವನದ ಗುಣಮಟ್ಟವನ್ನು ಹೆಚ್ಚಿಸಲು ನೆರವಾಗುತ್ತಿವೆ.

ಟಿವಿಯ ಮತ್ತೊಂದು ಪ್ರಮುಖ ಪಾತ್ರ ಮನರಂಜನೆ. ಧಾರಾವಾಹಿಗಳು, ಚಲನಚಿತ್ರಗಳು, ಕ್ರೀಡಾ ಪ್ರಸಾರ, ಸಂಗೀತ ಕಾರ್ಯಕ್ರಮಗಳು, ಇವೆಲ್ಲವೂ ಕುಟುಂಬಗಳನ್ನು ಒಂದೆಡೆ ಸೇರಿಸುವ ಸಂಪನ್ನ ಧಾರವಾಹಿಗಳಂತೆ ಕೆಲಸ ಮಾಡುತ್ತವೆ. ಕ್ರಿಕೆಟ್, ಫುಟ್ಬಾಲ್, ಅಂತಾರಾಷ್ಟ್ರೀಯ ಕ್ರೀಡಾ ಪ್ರಸಾರಗಳು ರಾಷ್ಟ್ರಪ್ರೇಮ, ಸಹಕಾರ ಮತ್ತು ಕ್ರೀಡಾಸ್ಫೂರ್ತಿಯನ್ನು ಉತ್ತೇಜಿಸುತ್ತವೆ. ಹಲವಾರು ಸಾಮಾಜಿಕ ಸಮಸ್ಯೆಗಳಮೇಲೂ ಟಿವಿ ಜಾಗ್ರತಿಯನ್ನು ಮೂಡಿಸಿ ಸಮಾಜದಸುಧಾರಣೆಗೆ ಕಾರಣವಾಗುತ್ತಿದೆ.

ಡಿಜಿಟಲ್ ಯುಗದಲ್ಲಿ ಮೊಬೈಲ್, ಇಂಟರ್ನೆಟ್ ಮತ್ತು ಔಖಿಖಿ ಪ್ಲಾಟ್‌ಫಾರ್ಮ್‌ಗಳು ಜನಪ್ರಿಯವಾದರೂ ಟಿವಿಯ ಪ್ರಾಬಲ್ಯ ಕಡಿಮೆಯಾಗಿಲ್ಲ. ಬದಲಿಗೆ ಅದು ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಊಆ, ಸ್ಮಾರ್ಟ್ ಟಿವಿ, ಇಂಟರ್ನೆಟ್ ಕನೆಕ್ಷನ್ ಮೊದಲಾದ ರೂಪಗಳಲ್ಲಿ ಮತ್ತಷ್ಟು ಬಲಿಷ್ಠವಾಗಿದೆ. ಇದರಿಂದಾಗಿ ದೂರದರ್ಶನದ ಪ್ರಭಾವ ವಿಶ್ವಮಟ್ಟದಲ್ಲಿ ಇನ್ನೂ ಹೆಚ್ಚಿದೆ.

ಹೀಗಾಗಿ ಅಂತರಾಷ್ಟ್ರೀಯ ಟಿವಿ ದಿನಾಚರಣೆ ಮಾಧ್ಯಮದ ಜವಾಬ್ದಾರಿ, ನೈತಿಕತೆ, ಜನರ ಅಭಿಪ್ರಾಯ ನಿರ್ಮಾಣ ಹಾಗೂ ಮಾನವ ಸಮಾಜದ ಒಗ್ಗಟ್ಟಿಗೆ ಟಿವಿ ನೀಡುತ್ತಿರುವ ಕೊಡುಗೆಗ ಸ್ಮರಿಸುವ ದಿನವಾಗಿದೆ. ದೂರದರ್ಶನವನ್ನು ಜವಾಬ್ದಾರಿಯುತವಾಗಿ ಬಳಸಿದರೆ ಅದು ಸಮಾಜ ಸುಧಾರಣೆಯ ಶಕ್ತಿಯುತ ಸಾಧನವಾಗುತ್ತದೆ ಎಂಬ ಸಂದೇಶವನ್ನು ಈ ದಿನ ಸಾರುತ್ತದೆ.

# ವಿದ್ಯಾರ್ಥಿ ಜೀವನಕ್ಕೆ ಸಾಮಾಜಿಕ ಜಾಲತಾಣವೆಂಬ ಪಿಡುಗು

ಈ ಹಿಂದೆ ಮನುಷ್ಯನಿಗೆ ಬದುಕಲು ನೀರು, ಗಾಳಿ, ಆಹಾರ, ಬಟ್ಟೆ ಮತ್ತು ವಸತಿಯ ಬಹು ಮುಖ್ಯವಾಗಿ ಬೇಕಾದ ಅಂಶಗಳಾಗಿದ್ದವು. ಆದರೆ ಇಂದು ಇವುಗಳೆಲ್ಲವನ್ನು ಮೀರುವಷ್ಟು ಸಾಮಾಕ ಜಾಲತಾಣಗಳು ಪ್ರಭಾವ ಬೀರಿವೆ. ಎಲ್ಲೋ ಸಾವಿರಾರು ಕಿಲೋಮೀಟರ್ ದೂರದಲ್ಲಿ ನಡೆಯುವ ಘಟನೆ ಒಂದನ್ನು ಟಿವಿಗು ಮುನ್ನ ಈ ಸಾಮಾಕ ಜಾಲತಾಣಗಳು ನಮಗೆ ತಲುಪಿಸುತ್ತವೆ. ಮಾಧ್ಯಮದವರಿಗೂ ಸಹ ಸುದ್ದಿಗಳನ್ನು ಸಾಮಾಜಿಕ ಜಾಲತಾಣಗಳ ಮೂಲಕವೇ ತಿಳಿಯುತ್ತಿರಬಹುದು.

ಹೀಗೆ ಕೋವಿಡ್ ಸಮಯದಲ್ಲಿ ಶಿಕ್ಷಣದ ಸಲುವಾಗಿ ಶುರುವಾದ ಆನ್ಲೈನ್ ತರಗತಿಗಳು ಎಲ್ಲಾ ವಿದ್ಯಾರ್ಥಿಗಳನ್ನು ಮೊಬೈಲ್, ಟ್ಯಾಬ್ ಮತ್ತು ಲ್ಯಾಪ್ಟಾಪ್ ನಂತಹ ಉಪಕರಣಗಳ ದಾಸರಾಗಿ ಮಾಡಿದೆ. ಶಿಕ್ಷಣಕ್ಕೆ ಶುರುವಾದ ಇವುಗಳ ಬಳಕೆ ಇಂದು ಸಾಮಾಜಿಕ ಜಾಲತಾಣಕ್ಕೆ ಗುಲಾಮರಾಗಿ ಬದಲಾಯಿಸಿದೆ. ಇದು ವಿದ್ಯಾರ್ಥಿಗಳ ಜೀವನದಲ್ಲಿ ಬಹು ಮುಖ್ಯ ಪಾತ್ರವನ್ನು ವಹಿಸುತ್ತದೆ. ಸಾಮಾಜಿ-ಕ ಜಾಲತಾಣದಲ್ಲಿ ಖಾತೆ ಇಲ್ಲದ ವಿದ್ಯಾರ್ಥಿಯೆ ಇಲ್ಲ. ಇದೇನು ಕೆಟ್ಟದ್ದಲ್ಲ ನಾವು ಅದನ್ನು ಒಳ್ಳೆಯದಕ್ಕೆ ಬಳಸಿದರೆ ಅದು ಒಳ್ಳೆಯದು ಕೆಟ್ಟದಕ್ಕೆ ಬಳಸಿಕೊಂಡರೆ ಅದು ಕೆಟ್ಟದ್ದು. ಇದರ ಉಪಯೋಗ ನಮ್ಮ ಬಳಕೆಯ ಮೇಲೆ ನಿಂತಿದೆ.

ವಿದ್ಯಾರ್ಥಿ ಜೀವನದಲ್ಲಿ ಸಾಮಜಿ-ಕ ಜಾಲತಾಣಗಳ ಪರಿಣಾಮಗಳು ಧನಾತ್ಮಕ ಮತ್ತು ಋಣಾತ್ಮಕ ಎರಡನ್ನು ಒಳಗೊಂಡಿದೆ. ಇದು ಕೌಶಲ್ಯವನ್ನು ಹೆಚ್ಚಿಸುತ್ತದೆ. ಜ್ಞಾನವನ್ನು ಹಂಚಿಕೊಳ್ಳಲು ಮತ್ತು ಜಾಲಬಂದ ಬೆಳೆಸಲು ಅವಕಾಶ ನೀಡುತ್ತದೆ. ವಿವಿಧ ಕೌಶಲ್ಯಗಳನ್ನು ಕಲಿಯಲು ಮತ್ತು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ. ಉದಾಹರಣೆಗೆ ಯೂಟ್ಯೂಬ್ ನಲ್ಲಿನ ಶಿಕ್ಷಣದ ವಿಡಿಯೋಗಳು. ವಿದ್ಯಾರ್ಥಿಗಳು ವೃತ್ತಿಪರರೊಂದಿಗೆ ಸಂಪರ್ಕ ಸಾಧಿಸಬಹುದು. ಉದ್ಯೋಗಾವಕಾಶಗಳನ್ನು ಅನ್ವೇಶಿಸಬಹುದು ಮತ್ತು ತಮ್ಮ ವೈಯಕ್ತಿಕ ಬ್ರಾಂಡ್ ಅನ್ನು ನಿರ್ಮಿಸಬಹುದು. ಜ್ಞಾನವನ್ನು ಹಂಚಿಕೊಳ್ಳಲು ಮತ್ತು ತಮ್ಮ ಆಸಕ್ತಿಯ ಕ್ಷೇತ್ರಗಳಲ್ಲಿ ತಜ್ಞರ ಅಭಿಪ್ರಾಯಗಳನ್ನು ಪಡೆಯಲು ಇದು ಒಂದು ವೇದಿಕೆಯನ್ನು ಒದಗಿಸುತ್ತದೆ. ಇಷ್ಟೆಲ್ಲ ಒಳ್ಳೆಯ ವಿಷಯಗಳ ನಡುವೆ ಇಡೀ ಜಗತ್ತನ್ನೇ ಕಗ್ಗತ್ತಲ್ಲಿಗೆ ದೂಡುವಂತೆ ಕೆಟ್ಟ ಪರಿಣಾಮಗಳು ಸಹ ಇದರಲ್ಲಿ ಇದೆ.


ಮಕ್ಕಳ ವಯಸ್ಸು ತುಂಬಾ ಸೂಕ್ಷ್ಮ ಮತ್ತು ಚಂಚಲವಾಗಿದ್ದು ಸಾಮಾಜಿಕ ಮಾಧ್ಯಮಗಳು ಅವರ ಆಲೋಚನೆ ಮತ್ತು ನಡವಳಿಕೆಯನ್ನು ಸುಲಭವಾಗಿ ಬದಲಾಯಿಸಬಹುದು. ಚಿಕ್ಕ ವಯಸ್ಸಿನಲ್ಲಿ ಮಕ್ಕಳು ಒಳ್ಳೆಯದು ಮತ್ತು ಕೆಟ್ಟದ್ದನ್ನು ಪ್ರತ್ಯೇಕಿಸಲು ಸಾಧ್ಯವಾಗುವುದಿಲ್ಲ. ಹೀಗಾಗಿ ಅವರು ಸುಲಭವಾಗಿ ಹಾಳಾಗಲು ಕಾರಣವಾಗಬಹುದು.ಹೀಗಾಗಿ ಪೋಷಕರು ಸಾಮಾಜಿಕ ಮಾಧ್ಯಮವು ಮಕ್ಕಳ ಮೇಲೆ ಯಾವ ರೀತಿ ಕೆಟ್ಟ ಪರಿಣಾಮಗಳನ್ನು ಬೀರುತ್ತದೆ ಎಂಬುದನ್ನು ತಿಳಿದುಕೊಳ್ಳುವುದು ಬಹಳ ಮುಖ್ಯ. ಮಕ್ಕಳ ಮೇಲೆ ಸಾಮಾಜಿಕ ಮಾಧ್ಯಮದ ಕೆಲವು ನಕಾರಾತ್ಮಕ ಪರಿಣಾಮಗಳು ಹೀಗಿರಬಹುದು,

ಸಾಮಾಜಿಕ ಮಾಧ್ಯಮದ ವ್ಯಾಪ್ತಿ ತುಂಬಾ ವಿಶಾಲವಾದದ್ದು, ಮಕ್ಕಳು ಎಲ್ಲಿ ಮತ್ತು ಹೇಗೆ ಮಾಹಿತಿಯನ್ನು ಬಳಸುತ್ತಾರೆ ಎಂಬುದನ್ನು ನೀವು ನಿಯಂತ್ರಿಸಲಾಗುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಮಕ್ಕಳನ್ನು ಅಶ್ಲೀಲ, ಹಾನಿಕಾರಕ ಅಥವಾ ಗ್ರಾಫಿಕ್ಸ್ ವೆಬ್ಸೈಟ್ಗಳಿಗೆ ತೆಗೆದುಕೊಂಡು ಹೋಗಬಹುದು. ಸಾಮಾಜಿಕ ಮಾಧ್ಯಮ ವೆಬ್ಸೈಟ್ಗಳಲ್ಲಿ ಸೈಬರ್ ಬುಲ್ಲಿಂಗ್ ಕೂಡ ಸಾಕಷ್ಟು ಹೆಚ್ಚಾಗಿದೆ. ಇದು ಅಪಾಯ ಕಾರ್ಯ ಪರಿಣಾಮಗಳನ್ನು ಉಂಟು ಮಾಡಬಹುದು. ಪ್ರತಿ ವರ್ಷ ಅನೇಕ ಮಕ್ಕಳು ಇದಕ್ಕೆ ಬಲಿಯಾಗುತ್ತಾರೆ.ಸಾಮಾಜಿಕ ಜಾಲತಾಣಗಳ ಮೂಲಕ ಅನೇಕರು ದಾರಿ ತಪ್ಪಿಸುವ ಮತ್ತು ತಪ್ಪು ಮಾಹಿತಿಯನ್ನು ಹರಡುತ್ತಾರೆ. ಇದ-ರಿಂದ ಅಮಾಯಕರು ಮಕ್ಕಳು ಮುಜುಗರ ಹಾಗೂ ಸಮಸ್ಯೆ ಅನುಭವಿಸುವಂಥಾಗಿದೆ. ಸುಳ್ಳು ವದಂತಿಗಳು ಹಾಗೂ ತಪ್ಪು ಮಾಹಿತಿ ಸಹ ಸಾಮಾಜಿಕ ಮಾಧ್ಯಮಗಳ ಮೂಲಕ ಹರಡುತ್ತವೆ. ಸಮಾಜ ವಿರೋಧಿ ಜನರು ಹೆಚ್ಚಾಗಿ ಇಂತಹ ವದಂತಿಗಳನ್ನು ಹರಡುವ ಮೂಲಕ ಅವರು ಜನರನ್ನು ದಾರಿ ತಪ್ಪಿಸುತ್ತಾರೆ ಮತ್ತು ಬ್ಲಾಕ್ಮೇಲ್ ಕೂಡ ಮಾಡುತ್ತಾರೆ. ಸಾಮಾಜಿಕ ಮಾಧ್ಯಮವು ಕೆಲವು ಪ್ರಯೋಜನಗಳನ್ನು ಹೊಂದಿದೆಯಾದರೂ ಹಾನಿಯೇ ಅಧಿಕವಾಗಿದೆ. ಸಾಮಾಜಿಕ ಮಾಧ್ಯಮದಲ್ಲಿ ಹೆಚ್ಚು ಸಮಯ ಕಳೆಯುವುದರಿಂದ ಮಕ್ಕಳ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ ಮತ್ತು ಮಕ್ಕಳು ಹೆಚ್ಚಾಗಿ ಸಾಮಾಜಿಕ ಮಾಧ್ಯಮಕ್ಕೆ ವ್ಯಸನಿಯಾಗುತ್ತಾರೆ. ಇದು ಮಗುವಿನ ಆರೋಗ್ಯದ ಮೇಲು ಪರಿಣಾಮ ಬೀರಬಹುದು.

ಆಧುನಿಕ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಜೀವನ ಎಲ್ಲವೂ ಪರಿವರ್ತನೆ ಹಾದಿಯಲ್ಲಿ ಸಾಗುತ್ತಿದೆ. ಅವರು ತಮ್ಮ ಸ್ವಾಭಾವಿಕ ಅಧ್ಯಯನದಿಂದ ಗಮನವನ್ನು ಬೇರೆಡೆಗೆ ತಿರುಗಿಸಲು ವಾಟ್ಸಾಪ್, ಫೇಸ್ ಬುಕ್ ಮತ್ತು ಇನ್ಸ್ಟಾಗ್ರಾಮ್ ವಿದ್ಯಾರ್ಥಿಗಳನ್ನು ಹೆಚ್ಚು ಸೆಳೆಯುತ್ತದೆ. ಅವರು ಇಡೀ ಸಮಯ ಚಾಟ್ ಮಾಡುವುದರಲ್ಲಿ ನಿರತರಾಗಿರುತ್ತಾರೆ. ಇದು ಅವರ ಅಧ್ಯಯನಕ್ಕೆ ಅಡ್ಡಿಪಡಿಸುವ ದೊಡ್ಡ ಸಾಧನವಾಗಿದೆ. ಸಾಮಾಕ ಜಾಲತಾಣಗಳ ಕಾರಣದಿಂದ ಲಕ್ಷಾಂತರ ವಿದ್ಯಾರ್ಥಿಗಳ ಕಣ್ಣುಗಳು ದುರ್ಬಲವಾಗಿವೆ. ಇಂಟರ್ನೆಟ್ ಬಂದ ನಂತರ ಮಕ್ಕಳು ಹೊರಂಗಣ ಆಟವನ್ನು ಮರೆತಂತೆ ಅನಿಸುತ್ತದೆ. ಇದರಿಂದಾಗಿ ಅವರ ದೈಹಿಕ ಬೆಳವಣಿಗೆಗೆ ಮಾತ್ರವಲ್ಲದೆ ಅವರ ಮಾನಸಿಕತೆಯ ಮೇಲು ಹೆಚ್ಚು ಪರಿಣಾಮ ಬೀರುತ್ತಿದೆ. 2015 ರಲ್ಲಿ ಬ್ರಿಟಿಷ್ ಸೈಕಾಲಜಿ ಸೊಸೈಟಿ ನಡೆಸಿದ ಅಧ್ಯಯನವು ದಿನವಿಡೀ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟಳಿಗೆ ಲೈಕ್ ಮಾಡುವುದು, ಸಂದೇಶಗಳಿಗೆ ಪ್ರತ್ಯುತ್ತ-ರಿಸುವುದು ಹೊತ್ತ ಸ್ನೇಹಿತರೊಂದಿಗೆ ಚಾಟ್ ಮಾಡುವುದು ಮಕ್ಕಳ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ ಎಂದು ಬಹಿರಂಗಪಡಿಸಿತು ಫೇಸ್ಬುಕ್ ಬಳಕೆಯ ಮಕ್ಕಳು ತಮ್ಮ ಜೀವನದಲ್ಲಿ ಅತೃಪ್ತರಾಗುತ್ತಿದ್ದಾರೆ ಎಂದು ಮಿಚಿಗನ್ ವಿಶ್ವವಿದ್ಯಾನಿಲಯದ ಅಧ್ಯಯನವು ತಿಳಿಸಿದೆ.

ಸಾಮಾಜಿಕ ಜಾಲತಾಣಗಳು ಒಂದು ಅಲಗುಗಳ ಕತ್ತಿಯಂತಿವೆ, ಇವುಗಳನ್ನು ಸರಿಯಾಗಿ ಮತ್ತು ವಿಮೋಚನೆಯಿಂದ ಬಳಸಿದರೆ ಅವು ವಿದ್ಯಾರ್ಥಿ ಶೈಕ್ಷಣಿಕ ಮತ್ತು ವೃತ್ತಿಪರ ಬೆಳವಣಿಗೆಗೆ ಪ್ರಬಲ ಸಾಧನವಾಗುತ್ತವೆ. ಆದರೆ ನಿಯಂತ್ರಣವಿಲ್ಲದೆ ಬಳಸಿದರೆ ಅದು ವಿದ್ಯಾರ್ಥಿಯ ಜೀವನದ ಮೇಲೆ ನಕಾರಾತ್ಮಕ ಪರಿಣಾಮ ಬೀರಿ ಗರಿಗಳನ್ನು ತಲುಪಲು ಅಡ್ಡಿಯಾಗುತ್ತವೆ. ಆದ್ದರಿಂದ ಪ್ರತಿ ವಿದ್ಯಾರ್ಥಿಯು ಸಾಮಾಜಿಕ ಜಾಲತಾಣಗಳ ಬಳಕೆಯಲ್ಲಿ ಸಮತೋಲನ ಮತ್ತು ಜವಬ್ದಾ-ರಿಯನ್ನು ಕಲಿಯುವುದು ಅತ್ಯಗತ್ಯ.

✍ ಜಾನು ಜಿಕೆ



# ವಿಶ್ವದರ್ಶನದಲ್ಲಿ ಶಾರದಾ ಪೂಜೆ

ಯಲ್ಲಾಪುರ : ವಿಶ್ವದರ್ಶನ ಶಿಕ್ಷಣ ಸಮೂಹದ ಕೇಂದ್ರೀಯ ಶಾಲೆಯಲ್ಲಿ ಮಕ್ಕಳ ದಿನಾಚರಣೆಯ ಅಂಗವಾಗಿ ಶಾರದಾ ಪೂಜೆಯನ್ನು ಹಮ್ಮಿಕೊಳ್ಳಲಾತ್ತು.ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಹರಿಪ್ರಕಾಶ್ ಕೋಣೆಮನೆ ಸೇರಿದಂತೆ ಕೇಂದ್ರೀಯ ಶಾಲೆಯ ಮುಖ್ಯಾಧ್ಯಾಪಕಿ ಮಹಾದೇವಿ ಭಟ್, ಕೇಂದ್ರೀಯ ಶಾಲೆಯ ಉಪನ್ಯಾಸಕರು ಮತ್ತು ಮಕ್ಕಳು ಉಪಸಿರಿದ್ದರು

# ಕ್ವಾಂಟಮ್ ಕ್ವೆಸ್ಟ್ ಪುಸ್ತಕ ಬಿಡುಗಡೆ ಸಮಾರಂಭ



ವಿಶ್ವದರ್ಶನ ಶಿಕ್ಷಣ ಸಮೂಹದಲ್ಲಿ ಕ್ವಾಂಟಮ್ ಕ್ವೆಸ್ಟ್ ಪುಸ್ತಕ ಬಿಡುಗಡೆ

ಯಲ್ಲಾಪುರ : ನಮ್ಮಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳು ಸಾಕಷ್ಟು ಜನ ಇದ್ದಾರೆ. ಅವರಿಗೆ ಒಂದು ವೇದಿಕೆಯ ಅಗತ್ಯ ಇಂದು ಖಂಡಿತ ಇದೆ. ಎಂದು ವಿಶ್ವದರ್ಶನ ಶಿಕ್ಷಣ ಸಮೂಹದ ನಿರ್ದೇಶಕ ಡಾ.ವಿಘ್ನೇಶ್ವರ ಗಾಂವ್ಕರ ಹೇಳಿದರು.ಯಲ್ಲಾಪುರದ ವಿಶ್ವದರ್ಶನ ಶಿಕ್ಷಣ ಸಂಸ್ಥೆಯ, ಶ್ರೀ ಶ್ರೀಮದ್ ಗಂಗಾಧರೇಂದ್ರ ಸರಸ್ವತಿ ಸಭಾಭವನದಲ್ಲಿ, ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ, ಸಿ.ಇ.ಟಿ, ನೀಟ್ ಪರೀಕ್ಷಾ ತರಬೇತಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡುತಿದ್ದರು.

ಸ್ಥಳೀಯವಾಗಿ ಇಂತಹ ತರಬೇತಿಗಳ ಕೊರತೆಗಳು ವಿದ್ಯಾರ್ಥಿಗಳಿಗೆ ಸಮಸ್ಯೆಯನ್ನು ತರಬಾರದು ಎನ್ನುವ ಉದ್ದೇಶಕ್ಕೆ ಈ ತರಗತಿಗಳನ್ನು ಆರಂಭಿಸಲಾಗಿದೆ. ಇಂತಹ ವೇದಿಕೆಗಳು ವಿದ್ಯಾರ್ಥಿಗಳ ಜೀವನಕ್ಕೆ ಭದ್ರ ಬುನಾದಿಯಾಗುತ್ತದೆ ಎಂದು ನುಡಿದರು.

ಸಿ.ಇ.ಟಿ ಮತ್ತು ನೀಟ್ ಕಾರ್ಯಕ್ರಮದ ಸಂಯೋಜಕ ಆರೋಗ್ಯ ಸ್ವಾಮಿ ಮಾತನಾಡಿ, ಓದು ಒಕ್ಕಾಲು ಬುದ್ಧಿ ಮುಕ್ಕಾಲು ಎಂಬ ಮಾತಿದೆ. ಇಂದು ಓದಿನ ಜೊತೆ ಬುದ್ಧಿ ಕೂಡಾ ಮುಖ್ಯ. ಈ ಸಂಸ್ಥೆಯು ವಿದ್ಯಾರ್ಥಿಗಳ ಹಾಗೂ ಶಿಕ್ಷಣದ ಕುರಿತು ವಿಶೇಷ ಕಳಕಳಿ ಇರುವ ಸಂಸ್ಥೆಯಾಗಿದೆ. ಈ ತರಬೇತಿಯ ಪ್ರಯೋಜನಗಳನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ಪಡೆದುಕೊಳ್ಳಬೇಕು. ಇಂತಹ ತರಬೇತಿಗಳನ್ನು ಪಡೆದುಕೊಳ್ಳಲು ಇಂದು ವಿದ್ಯಾರ್ಥಿಗಳು ಬೇರೆ ಬೇರೆ ರಾಜ್ಯಗಳಿಗೆ ತೆರಳುತ್ತಿದ್ದಾರೆ. ಆದ್ದ-ರಿಂದ ಇದರ ಉಪಯೋಗವನ್ನು ಎಲ್ಲರೂ ತೆಗೆದುಕೊಳ್ಳಬೇಕು ಎಂದರು.

ಕಾರ್ಯಕ್ರಮದ quantum quest’ ‘ ಪುಸ್ತಕವನ್ನು ಬಿಡುಗಡೆ ಗೊಳಿಸಲಾಯಿತು. ಕಾರ್ಯಕ್ರಮದಲ್ಲಿ ಉಪನ್ಯಾಸಕ ಡಾ.ಸಂತೋಷ್ ಕುಮಾರ್ ಎಂ, ವಿಶ್ವದರ್ಶನ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಡಾ. ಡಿ.ಕೆ ಗಾಂವ್ಕರ್ ಸ್ವಾಗತಿಸಿದರು. ಜೀವಶಾಸ್ತ್ರ ಉಪನ್ಯಾಸಕಿ ಕಾವ್ಯಾ ಹೆಗಡೆ ವಂದಿಸಿದರು ಮತ್ತು ಉಪನ್ಯಾಸಕ ವಿನಾಯಕ್ ಭಟ್ ಕಾರ್ಯಕ್ರಮವನ್ನು ನಿರ್ವಹಿಸಿದರು.

# ನಾವು ಹೃದಯದಿಂದ ದೊಡ್ಡವರಾಗಬೇಕು



ಯಲ್ಲಾಪುರ: ಮಕ್ಕಳಿಗೆ ಉತ್ತಮ ಶಿಕ್ಷಣ ಮತ್ತು ಸಂಸ್ಕಾರ ನೀಡುವ ಪಾಲಕರ ಪಾತ್ರ ಉತ್ತಮ ಸಮಾಜ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಒಂದು ಶಾಲೆ ಚೆನ್ನಾಗಿ ಮುನ್ನಡೆಯುಬೇಕಾದರೆ ಮಕ್ಕಳು, ಶಾಲೆ ಹಾಗೂ ಶಿಕ್ಷಕರು ಮಾತ್ರವಲ್ಲದೆ ಪಾಲಕರ ಪಾತ್ರ ಅದರಲ್ಲಿ ತುಂಬಾ ದೊಡ್ಡದು ಎಂದು ವಿಶ್ವದರ್ಶನ ಶಿಕ್ಷಣ ಸಮೂಹದ ಅಧ್ಯಕ್ಷ ಹರಿಪ್ರಕಾಶ ಕೋಣೆಮನೆ ಹೇಳಿದರು ಅವರು ವಿಶ್ವದರ್ಶನ ಶಿಕ್ಷಣ ಸಮೂಹದ ಕನ್ನಡ ಮಾಧ್ಯಮ ಪ್ರೌಢಶಾಲೆಯಲ್ಲಿ ಆಯೋಜಿಸಿದ ವಾರ್ಷಿಕ ಪ್ರಶಸ್ತಿ ಪ್ರಧಾನ ಸಮಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಕೆಲವ-ರಿಗೆ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಿದರಾಯಿತು, ಅಲ್ಲಿಗೆ ತಮ್ಮ ಜವಾಬ್ದಾರಿ ಮುಗಿಯಿತು ಎಂದು ಸುಮ್ಮನಾಗುತ್ತಾರೆ. ಬಹುತೇಕ ವಿದ್ಯಾರ್ಥಿಗಳು ಒಳ್ಳೆಯ ವಿಷಯಗಳ ಕಡೆಗೆ ಆಕರ್ಷಣೆ ಹೊಂದಿ ಉತ್ತಮ ಅಂಕಗಳನ್ನು ಗಳಿಸುವುದರ ಮೂಲಕ ತಮ್ಮ ಬದುಕನ್ನು ಉಜ್ವಲ ಗೊಳಿಸಿಕೊಳ್ಳುತ್ತಾರೆ. ಮಕ್ಕಳು ಶಿಕ್ಷಕರೊಟ್ಟಿಗೆ ಕಾಲ ಕಳೆಯುವುದಕ್ಕಿಂತ ಹೆಚ್ಚಾಗಿ ಪಾಲಕರೊಂದಿಗೆ ಕಾಲ ಕಳೆಯುತ್ತಾರೆ. ಅದ್ದರಿಂದ ಮಕ್ಕಳನ್ನು ತಿದ್ದುವತ್ತ ಪಾಲಕರ ಪಾತ್ರ ತುಂಬಾ ಮುಖ್ಯವಾದದ್ದು. ವಿಶ್ವದರ್ಶನ ಶಾಲೆಯ ಲಾಂಛನದ ಬಗ್ಗೆ ನನಗೆ ತುಂಬಾ ಹೆಮ್ಮೆ ಇದೆ, ನಮ್ಮ ವಿಶ್ವದರ್ಶನದ ಲಾಂಛನವಾದ ಚಿಟ್ಟೆಯ ಹಾಗೆ ನಮ್ಮ ಮಕ್ಕಳು ಕೂಡ ಆಗಬೇಕು ಮೊದಮೊದಲು ಚಿಟ್ಟೆ ಒಂದು ಹುಳುವಾಗಿದ್ದು ನಂತರ ವಿವಿಧ ಘಟ್ಟಗಳನ್ನ ದಾಟಿ ಸುಂದರ ಬಣ್ಣ ಬಣ್ಣದ ರೆಕ್ಕೆಗಳನ್ನು ಪಡೆದುಕೊಂಡು ಒಂದು ಚಿಟ್ಟೆಯಾಗಿ ಮಾರ್ಪಾಡಾಗುತ್ತದೆ.

ಇದು ಮಕ್ಕಳಿಗೆ ಅತ್ಯಂತ ಆಕರ್ಷಣಿಯವಾಗಿದೆ. ಹಾಗೆಯೇ ವಿದ್ಯಾರ್ಥಿಯಾದವರು ವಿವಿಧ ಹಂತಗಳಾದ ಮನೆ, ಶಾಲೆ, ಕುಟುಂಬ ಎಲ್ಲವನ್ನು ದಾಟಿಕೊಂಡು ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎನ್ನುವುದೇ ನಮ್ಮ ಉದ್ದೇಶ. ಒಂದು ಶಿಲೆಗೆ ಮೂರ್ತಿ ಆದಾಗ ಮಾತ್ರ ಬೆಲೆ. ಚಾಣದ ಪೆಟ್ಟನ್ನು ತಿಂದ ಶಿಲೆ ಸುಂದರ ಮೂರ್ತಿಯಾಗಿ ಗರ್ಭಗುಡಿಯಲ್ಲಿ ಸ್ಥಾನ ಪಡೆದುಕೊಳ್ಳುತ್ತದೆ. ಹೆಚ್ಚೆಚ್ಚು ಪೆಟ್ಟು ತಿಂದ ಹಾಗೆ ಆ ಶಿಲೆ ಮುರಿಯುವುದಿಲ್ಲ ಬದಲಾಗಿ ಶ್ರೇಷ್ಟತೆಯನ್ನು ಪಡೆದುಕೊಳ್ಳುತ್ತದೆ. ಚಾಣದ ಪೆಟ್ಟನ್ನು ತಿನ್ನದ ಶಿಲೆ ಚಪ್ಪಡಿಕಲ್ಲಾಗಿ ಉಳಿದುಬಿಡುತ್ತದೆ. ವಿಧ್ಯಾರ್ಥಿಗಳದನೀವು ಗರ್ಭಗುಡಿಯ ಶಿಲೆಯಾಗಲು ಪ್ರಯತ್ನಿಸಬೇಕು.

ಹಿರಿಯರನ್ನು ಕಂಡಾಗ ತಲೆಬಾಗಿ ನಮಸ್ಕರಿಸಬೇಕು ಹೀಗೆ ಮಾಡುವುದರಿಂದ ನಾವು ಚಿಕ್ಕವರಗುವುದಿಲ್ಲ. ಇವತ್ತು ಯಾರು ವಿನಮ್ರರಾಗಿರುತ್ತಾರೋ ಮುಂದೆ ಸಮಾಜದಲ್ಲಿ ತಲೆ ಎತ್ತಿ ಬದುಕುತ್ತಾರೆ.

ನಾವು ಹೃದಯದಿಂದ ದೊಡ್ಡವರಾಗಬೇಕು. ಈ ವರ್ಷ ಎಸ್.ಎಸ್.ಎಲ್.ಸಿ ಯಲ್ಲಿ ಯಾರು ಶೇ.95 ಕ್ಕಿಂತ ಹೆಚ್ಚು’ ಫಲಿತಾಂಶ ಗಳಿಸುತ್ತಾರೊ ಅಂತಹ ವಿಧ್ಯಾರ್ಥಿಗಳಿಗೆ ಉತ್ಕೃಷ್ಟ ಮಟ್ಟದ ಪದವಪೂರ್ವ ಶಿಕ್ಷಣವನ್ನು ಉಚಿತವಾಗಿ ನಾವು ನೀಡುತ್ತೇವೆ ಎಂದು ಹೇಳಿ ’ರು.

ಪಟ್ಟಣದ ರೋಟರಿ ಶಾಲೆಯ ಪ್ರಾಂಶುಪಾಲ ದೇವಿದಾಸ ಪಟಗಾರ ಮಾತನಾಡಿ ಜೀವನದಲ್ಲಿ ಅಸಾದ್ಯ ಎನ್ನುವುದು ಯಾವುದೂ ಇಲ್ಲ. ಅಸಾಧ್ಯದಲ್ಲೇ ಸಾಧ್ಯ ಎನ್ನುವ ಪದವಿದೆ. ನಿರಂತರವಾದ ಪ್ರಯತ್ನ ನಮ್ಮಲ್ಲಿರಬೇಕಷ್ಟೇ. ಆಗ ಸಾಧನೆ ಮಾಡಲು ನಮ್ಮಿಂದ ಸಾಧ್ಯವಾಗುತ್ತದೆ ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷೆ ವಿಶ್ವ ದರ್ಶನ ಪ್ರೌಢಶಾಲೆಯ ಮುಖ್ಯೋಧ್ಯಾಪಕಿ ಮುಕ್ತಾ ಶಂಕರ್ ಮಾತನಾಡಿ ವರ್ತನೆಯಲ್ಲಿ ಪರಿವರ್ತನೆ ತರುವುದೇ ನಿಜವಾದ ಶಿಕ್ಷಣ. ಎಂಟನೇ ತರಗತಿಗೆ ಬರುವಾಗ ನಮ್ಮ ಮಕ್ಕಳು ಅಂಜುತ್ತಾ, ಹೆದರುತ್ತಾ ಪಾಲಕರ ಹಿಂದೆ ಭಯದಿಂದ ಅವಿತುಕೊಂಡು ನಿಲ್ಲುತ್ತಿದ್ದ ಮಕ್ಕಳು ಇಂದು ವಿವಿಧ ಕ್ರೀಡಾ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಿ ಒಬ್ಬರಿಗಿಂತ ಒಬ್ಬರು ಎನ್ನುವಂತೆ ಸಾಧನೆಯನ್ನು ತೋರಿರುವುದು ಖುಷಿಯ ವಿಚಾರ. ಪ್ರಶಸ್ತಿಗೆ ಭಾಜನರಾದ ವಿದ್ಯಾರ್ಥಿಗಳು ಖುಷಿಯಿಂದ ಅದನ್ನು ಸ್ವೀಕರಿಸಿದರು. ಹಾಗೆಯೇ ಯಾರಿಗೆ ಪ್ರಶಸ್ತಿ ಸಿಗಲಿಲ್ಲವೋ ಅವರು ಬೇಸರಪಟ್ಟಿಕೊಳ್ಳುವಂತಹ ಅಗತ್ಯವಿಲ್ಲ. ಭಾಗವಹಿಸುವಿಕೆ ಅತ್ಯಂತ ಮುಖ್ಯ ಸೋಲಿನ ಹೆದರಿಕೆಗೆ ಭಯಪಟ್ಟು ಕುಳಿತರೆ ಏನೂ ಕೂಡ ಸಾಧ್ಯವಿಲ್ಲ ಮುಂದಿನ ಸಾರಿಯಾದರೂ ತಾವೆಲ್ಲರೂ ಮತ್ತೆ ಪ್ರಯತ್ನಿಸಿ ಪ್ರಶಸ್ತಿಗಳನ್ನ ಪಡೆದುಕೊಳ್ಳಬಹುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿವಿಧ ಸಾಂಸ್ಕೃತಿಕ ವಿಜೇತರಿಗೆ ಪ್ರಶಸ್ತಿ ಪ್ರಧಾನ ಮಾಡಲಾಯಿತು. ಪಾಲಕರಾದ ಈಶ್ವರ ನಾಯ್ಕ್ ಹುಲಗೋಡ, ಗಂಗಾ ಕೃಷ್ಣ ಭಟ್, ಕನ್ನಡ ಪ್ರೌಢ ಶಾಲೆಯ ಶಿಕ್ಷಕರು, ವಿಧ್ಯಾರ್ಥಿಗಳು ಉಪಸ್ಥಿತರಿದ್ದರು.

ಪ್ರಧಾನ ಸಂಪಾದಕ: ಹರಿಪ್ರಕಾಶ ಕೋಣೆಮನೆ, ಸಹಾಯಕ ಸಂಪಾದಕ: ವಿನಯ ಹೆಗಡೆ, ವೆಂಕಟೇಶ ಗೇರಗದ್ದೆ, ಸ್ಫೂರ್ತಿ ಹೆಗಡೆ. ಪೂಜಾ ಹುನಕುಪ್ಪಿ, ವಿದ್ಯಾರ್ಥಿ ಸಂಪಾದಕರು: ಶಿಲ್ಪಾ ಪೂಜಾರಿ, ರಾಧಾ ವಾಲಿಕಾರ, ಜಾನು ಕೊಕರೆ, ಜುಬಿನ ಕಾಂಬಳೆ, ಪ್ರಕಾಶ ಕನ್ನೂರ
ವಿಳಾಸ: ವಿಶ್ವದರ್ಶನ ಶಿಕ್ಷಣ ಸಂಸ್ಥೆ ಗಣೇಶಪುರಂ, ಯಲ್ಲಾಪುರ. ಸಂಪುಟ-3 ಸಂಚಿಕೆ-6